Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ

| | |
|---|---|
| भाग–IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ


| | | | |
|---|---|---|---|
| सं–1 | नई दिल्ली मंगलवार मार्च–13 1984 | रुधिरोद्गारि 1905 (शक) | खण्ड–1 |
| No. 1 | New Delhi Tuesday, March 13, 1984 | Rudhirodgari-1905 (Saka) | Vol. 1 |
| ಸಂಖ್ಯೆ ೧ | ನವದೆಹಲಿ ಮಂಗಳವಾರ, ಮಾರ್ಚ್ ೧೩, ೧೯೮೪ | ರುಧಿರೋದ್ಗಾರಿ-೧೯೦೫ (ಶಕ) | ಸಂಪುಟ ೧ |


## MINISTRY OF LAW, JUSTICE & COMPANY AFFAIRS

(Legislative Department)

New Delhi, September 16, 1983/Rudhirodgari 1905 (Sakha)

The translations in Kannada of the foloowing namely—(1) The wakf Act, 1954, (2) The Railway property (unlawful possession) Act, 1966 (3) The Telegraph wires (unlawful possession) Act, 1950 (4) The Disputed Elections (Prime minister and speaker) Act, 1977 (5) The Dock workers (Regulation of employment) Act, 1948 are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ,–(೧) ವಕ್ಫ್ ಅಧಿನಿಯಮ ೧೯೫೪ (೨) ರೈಲ್ವೆ ಸ್ವತ್ತಿನ (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೬೬ (೩) ಟೆಲಿಗ್ರಾಫ್ ತಂತಿಗಳು (ಕಾನೂನು ವಿರುದ್ಧ ಸ್ವಾಧೀನ) ಅಧಿನಿಯಮ, ೧೯೫೦ (೪) ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, ೧೯೭೭ (೫) ಹಡಗುಕಟ್ಟೆ ಕೆಲಸಗಾರರ (ನಿಯೋಜನಾ ವಿನಿಮಯಗಳು) ಅಧಿನಿಯಮ, ೧೯೪೮–ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದು.

# (ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧಿನಿಯಮ, 1977

[ಏಪ್ರಿಲ್ 18, 1977]

[ಜನವರಿ 1, 1983 ರಂದು ಜಾರಿಯಲ್ಲಿದ್ದಂತೆ]

ಪ್ರಧಾನಮಂತ್ರಿಯ ಮತ್ತು ಲೋಕ ಸಭಾಧ್ಯಕ್ಷನ ಸಂಧರ್ಭದಲ್ಲಿ ಸಂಸತ್ತಿನ ವಿವಾದಿತ ಚುನಾವಣೆಗಳ ಮತ್ತು ಅವುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪ್ರಾಧಿಕಾರಗಳು ವ್ಯವಹರಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು :—

## ಅಧ್ಯಾಯ—I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು ವಿವಾದಿತ ಚುನಾವಣಾ ಅಧಿನಿಯಮ, 1977 ಎಂದು ಕರೆಯತಕ್ಕದು.

(2) ಇದು 1977ರ ಫೆಬ್ರುವರಿ 3ನೆಯ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

2. ಪರಿಭಾಷೆಗಳು.—ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ವಿರದಿದ್ದರೆ.-

(ಕ) ''ಪ್ರಾಧಿಕಾರ'' ಎಂದರೆ, ಅರ್ಜಿಯ ಅಧಿವಿಚಾರಣೆಗಾಗಿ 4ನೇ ಪ್ರಕರಣದ ಮೇರೆಗೆ ರಚಿತವಾದ ಪ್ರಾಧಿಕಾರ ;

(ಖ) ''ಅಭ್ಯರ್ಥಿ'' ಎಂದರೆ, ಯಾವುದೇ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಕ್ರಮಬದ್ಧವಾಗಿ ನಾಮನಿರ್ದೇಶಿತನಾದ ಅಥವಾ ನಾಮನಿರ್ದೇಶಿತನಾಗಿರುವ ನೆಂದು ಕ್ಲೇಮು ಮಾಡುವ ವ್ಯಕ್ತಿ ;

(ಗ) ''ಖರ್ಚುಗಳು'' ಎಂದರೆ, ಈ ಅಧಿನಿಯಮದ ಮೇರೆಗಿನ ಅರ್ಜಿಯ ಅಧಿವಿಚಾರಣೆಯ ಅಥವಾ ಅದಕ್ಕೆ ಪ್ರಾಸಂಗಿಕವಾದ ಎಲ್ಲ ಖರ್ಚುಗಳು, ಚಾರ್ಜುಗಳು ಮತ್ತು ವೆಚ್ಚಗಳು ;

(ಘ) ''ಚುನಾವಣೆ'' ಎಂದರೆ, ಪ್ರಧಾನ ಮಂತ್ರಿಯ ಸಂಬಂಧದಲ್ಲಿನ ಅಥವಾ ಅಧ್ಯಕ್ಷನ ಸಂಬಂಧದಲ್ಲಿನ ಚುನಾವಣೆ ;

(ಙ) ''ಪ್ರಧಾನ ಮಂತ್ರಿಯ ಸಂಬಂಧದಲ್ಲಿನ ಚುನಾವಣೆ'' ಎಂದರೆ, ಅಂಥ ಚುನಾವಣೆಯ ಕಾಲದಲ್ಲಿ ಪ್ರಧಾನ ಮಂತ್ರಿ ಪದವಿಯನ್ನು ಹೊಂದಿರುವ ಅಥವಾ ಅಂಥ ಚುನಾವಣೆಯ ಅನಂತರ ಪ್ರಧಾನ ಮಂತ್ರಿಯಾಗಿ ನೇಮಿತನಾಗಿರುವ ವ್ಯಕ್ತಿಯ ಸಂಸತ್ತಿನ ಯಾವುದೊಂದು ಸದನಕ್ಕೆ ನಡೆದಿರುವ ಚುನಾವಣೆ ;

(ಚ) "ಅಧ್ಯಕ್ಷನ ಸಂಬಂಧದಲ್ಲಿ ಚುನಾವಣೆ'' ಎಂದರೆ, ಅಂಥ ಚುನಾವಣೆಯ ಕಾಲದಲ್ಲಿ ಅಧ್ಯಕ್ಷನ ಪದವಿಯನ್ನು ಹೊಂದಿರುವ ಅಥವಾ, ಅಂಥ ಚುನಾವಣೆಯ ಅನಂತರ ಆ ಸದನಕ್ಕೆ ಅಧ್ಯಕ್ಷನಾಗಿ ಆಯ್ಕೆಗೊಂಡ ವ್ಯಕ್ತಿಯ ಲೋಕಸಭೆಗೆ ನಡೆದಿರುವ ಚುನಾವಣೆ ;

(ಛ) "ಅರ್ಜಿ'' ಎಂದರೆ, ಚುನಾವಣೆಯನ್ನು ಪ್ರಶ್ನಿಸುವ ಅರ್ಜಿ ;

(ಜ) ''ನಿಯಮಿಸಲಾದುದು'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳ ಮೂಲಕ ನಿಯಮಿಸಲಾದುದು ;

(ಝ) ''ಆಯ್ಕೆಗೊಂಡ ಅಭ್ಯರ್ಥಿ'' ಎಂದರೆ, ಸಂದರ್ಭಾನುಸಾರ, ಪ್ರಧಾನ ಮಂತ್ರಿಯ ಸಂಬಂಧದಲ್ಲಿನ ಚುನಾವಣೆಯಲ್ಲಿ ಅಥವಾ ಅಧ್ಯಕ್ಷನ ಸಂಬಂಧದಲ್ಲಿನ ಚುನಾವಣೆಯಲ್ಲಿ ಕ್ರಮಬದ್ಧವಾಗಿ ಚುನಾಯಿತನಾದವನೆಂದು ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43)ರ 67ನೇ ಪ್ರಕರಣದ ಮೇರೆಗೆ ಯಾರ ಹೆಸರನ್ನು ಪ್ರಕಟಿಸಲಾಗಿದೆಯೋ ಆ ಅಭ್ಯರ್ಥಿ ;

(ಞ) ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರಲ್ಲಿ ಪರಿಭಾಷಿತವಾದ, ಆದರೆ ಈ ಅಧಿನಿಯಮದಲ್ಲಿ ಪರಿಭಾಷಿತವಾಗಿರದ ಪ್ರತಿಯೊಂದು ಪದಾವಳಿಗೆ ಆ ಅಧಿನಿಯಮದಲ್ಲಿರುವ ಅರ್ಥವೇ ಇರತಕ್ಕದು.

## ಅಧ್ಯಾಯ—II

### ವಿವಾದಿತ ಚುನಾವಣೆಗಳಿಗಾಗಿ ಪ್ರಾಧಿಕಾರಗಳು

3. ವಿವಾದಿತ ಚುನಾವಣೆಗಳ ಸಂಬಂಧದಲ್ಲಿ ಅರ್ಜಿಗಳು.—ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಸಲ್ಲಿಸಲಾದ ಅರ್ಜಿಯ ಮೂಲಕ ಹೊರತು, ಯಾವುದೇ ಚುನಾವಣೆಯನ್ನು ಪ್ರಶ್ನಿಸತಕ್ಕದಲ್ಲ.

4. ಅರ್ಜಿಯ ಅಧಿವಿಚಾರಣೆಯನ್ನು ಮಾಡುವ ಪ್ರಾಧಿಕಾರ.—(1) ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ಈ ಉದ್ದೇಶಕ್ಕಾಗಿ ರಚಿಸಿದ ಪ್ರಾಧಿಕಾರವು ಪ್ರತಿಯೊಂದು ಅರ್ಜಿಯ ಅಧಿವಿಚಾರಣೆಯನ್ನು ನಡೆಸತಕ್ಕದು.

(2) ಪ್ರಾಧಿಕಾರದಲ್ಲಿ ಒಬ್ಬನೇ ಸದಸ್ಯನಿರತಕ್ಕದು ; ಅವನು ಉಚ್ಚತಮ ನ್ಯಾಯಾಲಯದ ನ್ಯಾಯಾಧೀಶನಾಗಿದ್ದು ಭಾರತದ ಮುಖ್ಯ ನ್ಯಾಯಾಧಿಪತಿಯು ಈ ಬಗ್ಗೆ ನಾಮನಿರ್ದೇಶಿಸುವ ವ್ಯಕ್ತಿಯಾಗಿರತಕ್ಕದು.

(3) ಹಿಂದೆ ಹೇಳಿದ ಸದಸ್ಯನ ಪದವು ಯಾವುದೇ ಕಾರಣದಿಂದ ಖಾಲಿಯಾದರೆ, ಆ ಖಾಲಿ ಸ್ಥಾನವನ್ನು ತುಂಬಲು ಮುಖ್ಯ ನ್ಯಾಯಾಧಿಪತಿಯು ಕಾರ್ಯ ಸಾಧ್ಯವಾದಷ್ಟು ಬೇಗನೆ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶ ಮಾಡತಕ್ಕದು, ಮತ್ತು ತದನಂತರ ಅಂಥ ಅರ್ಜಿಯ ಅಧಿವಿಚಾರಣೆಯು ಪ್ರಾರಂಭದಿಂದಲೂ ಆ ಸದಸ್ಯನೇ ಪ್ರಾಧಿಕಾರವಾಗಿದ್ದರೆ ಹೇಗೋ ಹಾಗೆ ಆ ಅರ್ಜಿಯ ಅಧಿವಿಚಾರಣೆಯು ಮುಂದುವರಿಯತಕ್ಕದು :

ಪರಂತು, ಪ್ರಾಧಿಕಾರವು ತಾನು ಸೂಕ್ತವೆಂದು ಆಲೋಚಿಸಿದರೆ, ಈಗಾಗಲೇ ಪರೀಕ್ಷಿಸಲಾಗಿರುವ ಸಾಕ್ಷಿದಾರರಲ್ಲಿ ಯಾರನ್ನಾದರೂ ಪುನಃ ಕರೆಸಬಹುದು ಮತ್ತು ಪುನಃ ಪರೀಕ್ಷಿಸಬಹುದು.

## ಅಧ್ಯಾಯ–III

## ವಿವಾದಿತ ಚುನಾವಣೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸುವುದು

5. ಅರ್ಜಿಯನ್ನು ಸಲ್ಲಿಸುವುದು.—(1) ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43)ರ 100ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಮತ್ತು 101ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಒಂದು ಅಥವಾ ಹೆಚ್ಚಿನ ಆಧಾರಗಳ ಮೇಲೆ ಯಾವುದೇ ಚುನಾವಣೆಯಲ್ಲಿನ ಯಾವನೇ ಅಭ್ಯರ್ಥಿಯು ಅಥವಾ ಯಾವನೇ ಚುನಾಯಕನು ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯಾದ ದಿನಾಂಕದಿಂದ ಅಥವಾ ಚುನಾವಣೆಯಲ್ಲಿ ಒಬ್ಬನಿಗಿಂತ ಹೆಚ್ಚು ಆಯ್ಕೆಗೊಂಡ ಅಭ್ಯರ್ಥಿಗಳಿದ್ದರೆ ಮತ್ತು ಅವರ ಚುನಾವಣೆಯ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ದಿನಾಂಕಗಳಲ್ಲಿ ಕೊನೆಯ ದಿನಾಂಕದಿಂದ ನಲವತ್ತೈದು ದಿನಗಳೊಳಗೆ, ಆದರೆ ಆ ದಿನಾಂಕಕ್ಕಿಂತ ಮುಂಚಿತವಾಗಿರದೆ, ಅಂಥ ಚುನಾವಣೆಯನ್ನು ಪ್ರಶ್ನಿಸುವ ಅರ್ಜಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಬಹುದು:

ಪರಂತು, ಅಂಥ ಚುನಾವಣೆಯ ಕಾಲದಲ್ಲಿ, ಸಂದರ್ಭಾನುಸಾರ, ಪ್ರಧಾನ ಮಂತ್ರಿಯ ಅಥವಾ ಲೋಕ ಸಭಾ ಅಧ್ಯಕ್ಷನ ಪದವಿಯನ್ನು ಹೊಂದಿರದ ವ್ಯಕ್ತಿಯು ಮತ್ತು ಅವನು ಅಂಥ ಚುನಾವಣೆಯ ಅನಂತರ, ಆದರೆ ಅಂಥ ಚುನಾವಣಾ ಅರ್ಜಿಯನ್ನು ಸಲ್ಲಿಸುವ ಕಾಲವು ಮುಕ್ತಾಯವಾಗುವ ಮುಂಚೆ, ಆ ಪದಕ್ಕೆ ನೇಮಿತನಾಗಿದ್ದರೆ ಅಥವಾ ಆಯ್ಕೆಗೊಂಡಿದ್ದರೆ, ಅಂಥ ವ್ಯಕ್ತಿಯನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದ ಅಥವಾ ಲೋಕ ಸಭಾ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ ದಿನಾಂಕದಿಂದ ನಲವತ್ತೈದು ದಿನಗಳೊಳಗೆ, ಅಂಥ ಚುನಾವಣೆಯನ್ನು ಪ್ರಶ್ನಿಸುವ ಅರ್ಜಿಯನ್ನು ಸಲ್ಲಿಸಬಹುದು.

ವಿವರಣೆ:—ಈ ಉಪ–ಪ್ರಕರಣದಲ್ಲಿ "ಚುನಾಯಕನು" ಎಂದರೆ ಯಾವ ಚುನಾವಣೆಗೆ ಅರ್ಜಿಯು ಸಂಬಂಧಿಸಿದೆಯೋ ಆ ಚುನಾವಣೆಯಲ್ಲಿ ಮತದಾನ ಮಾಡಲು ಹಕ್ಕಿದವನು, ಅವನು ಅಂಥ, ಚುನಾವಣೆಯಲ್ಲಿ ಮತದಾನ ಮಾಡಿರಲಿ ಅಥವಾ ಇಲ್ಲದಿರಲಿ.

(2) ಅರ್ಜಿಯನ್ನು ಚುನಾವಣಾ ಆಯೋಗಕ್ಕೆ ಅಥವಾ ಅದು ಈ ಬಗ್ಗೆ ನೇಮಿಸಬಹುದಾದಂಥ ಇತರ ಅಧಿಕಾರಿಗೆ.—

(ಕ) ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು, ಅಥವಾ

(ಖ) ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಯು ಈ ಬಗ್ಗೆ ಲಿಖಿತದಲ್ಲಿ ಅಧಿಕೃತಗೊಳಿಸಿದ ವ್ಯಕ್ತಿಯು,

–ಕೊಟ್ಟಾಗ, ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ಭಾವಿಸತಕ್ಕದ್ದು.

(3) ಪ್ರತಿಯೊಂದು ಅರ್ಜಿಯ ಜತೆಗೂ ಅರ್ಜಿಯಲ್ಲಿ ನಮೂದಿಸಲಾಗಿರುವ ಪ್ರತ್ಯರ್ಜಿದಾರರೆಷ್ಟು ಜನರಿದ್ದಾರೋ ಅಷ್ಟು ಅದರ ಪ್ರತಿಗಳೂ ಇರತಕ್ಕದ್ದು ಮತ್ತು ಚುನಾವಣಾ ಆಯೋಗದ ಉಪಯೋಗಕ್ಕಾಗಿ ಒಂದು ಹೆಚ್ಚಿನ ಪ್ರತಿಯು ಇರತಕ್ಕದ್ದು, ಹಾಗೂ ಅಂಥ ಪ್ರತಿಯೊಂದು ಪ್ರತಿಯನ್ನು ಅರ್ಜಿಯ ಯಥಾಪ್ರತಿಯೆಂದು ಅರ್ಜಿದಾರನು ತನ್ನ ಸ್ವಂತ ಸಹಿಯನ್ನು ಮಾಡಿ ಅನುಪ್ರಮಾಣಿಸತಕ್ಕದ್ದು.

(4) ಅರ್ಜಿಯನ್ನು ಸಲ್ಲಿಸುವ ಕಾಲದಲ್ಲಿ ಖರ್ಚುಗಳ ಬಗೆಗಿನ ಭದ್ರತೆಯಾಗಿ ಎರಡು ಸಾವಿರ ರೂಪಾಯಿಗಳ ಮೊಬಲಗನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿದಾರನು ಚುನಾವಣಾ ಆಯೋಗದಲ್ಲಿ ಠೇವಣಿಯಿಡತಕ್ಕದ್ದು.

(5) ಅರ್ಜಿಯ ಅಧಿವಿಚಾರಣೆಯನ್ನು ನಡೆಸುತ್ತಿರುವ ಪ್ರಾಧಿಕಾರವು ಅರ್ಜಿಯ ಅಧಿವಿಚಾರಣೆಯನ್ನು ನಡೆಸುತ್ತಿರುವ ಯಾವುದೇ ಕಾಲದಲ್ಲಿ ಖರ್ಚುಗಳ ಬಗ್ಗೆ ತಾನು ನಿರ್ದೇಶಿಸಬಹುದಾದಂಥ ಹೆಚ್ಚಿನ ಭದ್ರತೆಯನ್ನು ಕೊಡುವಂತೆ ಅರ್ಜಿದಾರನನ್ನು ಕೇಳಬಹುದು.

(6) ಖರ್ಚುಗಳ ಬಗ್ಗೆ ಪ್ರಾಕಾಧಿಕಾರವು ನಿರ್ದೇಶಿಸಬಹುದಾದಂಥ ಭದ್ರತೆಯನ್ನು ಕೊಟ್ಟ ಹೊರತು, ಯಾವನೇ ವ್ಯಕ್ತಿಯು 10ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅರ್ಜಿಯ ಪ್ರತ್ಯರ್ಜಿದಾರನಾಗಿ ಸೇರಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

6. ಅರ್ಜಿಯಲ್ಲಿನ ಪಕ್ಷಕಾರರು.—ಅರ್ಜಿದಾರನು.—

(ಕ) ಚುನಾಯಿತರಾದ ಎಲ್ಲ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂದು ಘೋಷಣೆಯನ್ನು ಕ್ಲೇಮು ಮಾಡುವುದರ ಜೊತೆಗೆ ತಾನು ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡುವಲ್ಲಿ, ತನ್ನನ್ನುಳಿದು ಸ್ಪರ್ಧಿಸಿದ ಎಲ್ಲ ಅಭ್ಯರ್ಥಿಗಳನ್ನು ಮತ್ತು ಅಂಥ ಯಾವುದೇ ಹೆಚ್ಚಿನ ಘೋಷಣೆಯನ್ನು ಕ್ಲೇಮು ಮಾಡದೇ ಇರುವಲ್ಲಿ ಚುನಾಯಿತರಾದ ಎಲ್ಲ ಅಭ್ಯರ್ಥಿಗಳನ್ನು ; ಮತ್ತು

(ಖ) ಅರ್ಜಿಯಲ್ಲಿ ಯಾವ ಇತರ ವ್ಯಕ್ತಿಯ ವಿರುದ್ಧ ಯಾವುದೇ ಭ್ರಷ್ಟಾಚಾರದ ಆರೋಪಗಳನ್ನು ಮಾಡಲಾಗಿದೆಯೋ ಅವನನ್ನು,

–ತನ್ನ ಅರ್ಜಿಗೆ ಪ್ರತ್ಯರ್ಜಿದಾರನನ್ನಾಗಿ ಸೇರಿಸತಕ್ಕದ್ದು.

7. ಅರ್ಜಿಯ ಒಳಾಂಶಗಳು :—(1) ಅರ್ಜಿಯು,—

(ಕ) ಅರ್ಜಿದಾರನು ಆಧರಿಸಿರುವ ಮುಖ್ಯ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು ;

(ಖ) ಅಂಥ ಭ್ರಷ್ಟಾಚಾರವನ್ನು ಮಾಡಿದ್ದಾರೆಂದು ಹೇಳಲಾಗುವ ಪಕ್ಷಕಾರರ ಹೆಸರುಗಳ ಬಗ್ಗೆ ಸಾಧ್ಯವಾದಷ್ಟು ಪೂರ್ಣವಾಗಿರುವ ನಿರೂಪಣೆಯನ್ನೊಳಗೊಂಡು, ಅರ್ಜಿದಾರನು ಆರೋಪ ಮಾಡುವ ಯಾವುದೇ ಭ್ರಷ್ಟಾಚಾರದ ಬಗ್ಗೆ ಪೂರ್ಣ ವಿವರಗಳನ್ನು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರವು ನಡೆದ ದಿನಾಂಕವನ್ನು ಹಾಗೂ ಸ್ಥಳವನ್ನು ನಮೂದಿಸತಕ್ಕದ್ದು ; ಮತ್ತು

(ಗ) ವಾದ ಪ್ರತಿವಾದಗಳ ಸತ್ಯಾಪನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ ವಿಧಿಸಲಾದ ರೀತಿಯಲ್ಲಿ ಅರ್ಜಿದಾರನು ಆ ಅರ್ಜಿಗೆ ಸಹಿ ಮಾಡತಕ್ಕದ್ದು ಮತ್ತು ಅದನ್ನು ಸತ್ಯಾಪನೆ ಮಾಡತಕ್ಕದ್ದು :

ಪರಂತು, ಅರ್ಜಿದಾರನು ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡುವಲ್ಲಿ ಅಂಥ ಭ್ರಷ್ಟಾಚಾರದ ಆರೋಪದ ಮತ್ತು ಅದರ ವಿವರಗಳ ಸಮರ್ಥನೆ ಗಾಗಿ ನಿಯಮಿಸಲಾದ ನಮೂನೆಯಲ್ಲಿನ ಶಪಥ ಪತ್ರವು ಸಹ ಅರ್ಜಿಯ ಜತೆಗೆ ಇರತಕ್ಕದ್ದು.

(2) ಅರ್ಜಿಯ ಜತೆಗಿನ ಯಾವುದೇ ಅನುಸೂಚಿಗೆ ಅಥವಾ ಅನುಬಂಧಕ್ಕೆ ಸಹ ಅರ್ಜಿದಾರನು ಸಹಿ ಮಾಡತಕ್ಕದ್ದು ಮತ್ತು ಅದನ್ನು ಅರ್ಜಿಯ ರೀತಿಯಲ್ಲಿಯೇ ಸತ್ಯಾಪನೆ ಮಾಡತಕ್ಕದ್ದು.

8. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ.—ಎಲ್ಲ ಅಥವಾ ಯಾವನೇ ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂಬ ಘೋಷಣೆಯನ್ನು ಅರ್ಜಿದಾರನು ಕ್ಲೇಮು ಮಾಡುವುದರ ಜೊತೆಗೆ, ತಾನು ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂಬ ಹೆಚ್ಚಿನ ಘೋಷಣೆಯನ್ನು ಸಹ ಕ್ಲೇಮುಮಾಡಬಹುದು.

9. ಅರ್ಜಿಗಳನ್ನು ಸ್ವೀಕರಿಸಿದ ಮೇಲೆ ಪ್ರಕ್ರಿಯೆ.—(1) ಚುನಾವಣಾ ಆಯೋಗವು 5ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಅನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಆ ಅರ್ಜಿಯ ಅಧಿವಿಚಾರಣೆಯನ್ನು ಮಾಡಲು ಅದನ್ನು ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

(2) ಒಂದೇ ಚುನಾವಣೆಗೆ ಸಂಬಂಧಿಸಿ, 5ನೇ ಪ್ರಕರಣದ ಮೇರೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸ್ವೀಕರಿಸಿರುವಲ್ಲಿ, ಚುನಾವಣಾ ಆಯೋಗವು ಅವುಗಳನ್ನು ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಾಧಿಕಾರವು ತನ್ನ ವಿವೇಚನಾನುಸಾರ, ಅವುಗಳನ್ನು ಪ್ರತ್ಯೇಕವಾಗಿಯಾಗಲೀ ಅಥವಾ ಒಂದು ಅಥವಾ ಹೆಚ್ಚಿನ ಗುಂಪುಗಳಲ್ಲಿಯಾಗಲಿ ಅಧಿವಿಚಾರಣೆ ಮಾಡಬಹುದು.

## ಅಧ್ಯಾಯ—IV

## ಅರ್ಜಿಗಳ ಅಧಿವಿಚಾರಣೆ

10. ಅರ್ಜಿಗಳ ಅಧಿವಿಚಾರಣೆ.—(1) ಈ ಬಗ್ಗೆ ರಚಿಸಲಾದ ಯಾವುದೇ ನಿಯಮಗಳಿಗೆ ಒಳಪಟ್ಟು, ಯಾವುದೇ ಅರ್ಜಿಯನ್ನು ಅಧಿವಿಚಾರಣೆ ಮಾಡುವುದಕ್ಕಾಗಿರುವ ಪ್ರಾಧಿಕಾರವು ಅಧಿವಿಚಾರಣೆಯನ್ನು ನವದೆಹಲಿಯಲ್ಲಿ ಮಾಡತಕ್ಕದು.

(2) ಪ್ರಾಧಿಕಾರವು.—

(ಕ) 5ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರುವಲ್ಲಿ;

(ಖ) 5ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಥವಾ (4)ನೇ ಉಪ-ಪ್ರಕರಣದ ಅಥವಾ 6ನೇ ಪ್ರಕರಣದ ಉಪಬಂಧಗಳಿಗೆ ಅನುಗುಣವಾಗಿ ಅರ್ಜಿಯು ಇರದಿರುವಲ್ಲಿ,

ಅರ್ಜಿಯನ್ನು ವಜಾ ಮಾಡತಕ್ಕದು.

ವಿವರಣೆ.—ಈ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ವಜಾ ಮಾಡುವ ಆದೇಶವನ್ನು 16ನೇ ಪ್ರಕರಣದ (ಕ) ಖಂಡದ ಮೇರೆಗೆ ಮಾಡಲಾದ ಆದೇಶವೆಂದು ಭಾವಿಸತಕ್ಕದು.

(3) ಅರ್ಜಿಗೆ ಈಗಾಗಲೇ ಪ್ರತ್ಯರ್ಜಿದಾರನಾಗಿರದ ಯಾವನೇ ಅಭ್ಯರ್ಥಿಯು, ಅಧಿವಿಚಾರಣೆಯ ಪ್ರಾರಂಭದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಅವನು ಪ್ರಾಧಿಕಾರಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ ಮತ್ತು ಖರ್ಚುಗಳ ಭದ್ರತೆಗಾಗಿ ಪ್ರಾಧಿಕಾರವು ಮಾಡಬಹುದಾದ ಯಾವುದೇ ಆದೇಶಕ್ಕೆ ಒಳಪಟ್ಟು, ಪ್ರತ್ಯರ್ಜಿದಾರನಾಗಿ ಸೇರಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದು.

ವಿವರಣೆ.—ಈ ಉಪ-ಪ್ರಕರಣದ ಮತ್ತು 15ನೇ ಪ್ರಕರಣದ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎದುರು ಪ್ರತ್ಯರ್ಜಿದಾರರು ಹಾಜರಾಗಲು ಮತ್ತು ಅರ್ಜಿಯಲ್ಲಿನ ಕ್ಲೇಮು ಅಥವಾ ಕ್ಲೇಮುಗಳಿಗೆ ಉತ್ತರಿಸಲು ಗೊತ್ತುಪಡಿಸಿದ ದಿನಾಂಕದಂದು ಅರ್ಜಿಯ ಅಧಿ ವಿಚಾರಣೆಯು ಪ್ರಾರಂಭವಾಗುತ್ತದೆಯೆಂದು ಭಾವಿಸತಕ್ಕದು.

(4) ಖರ್ಚುಗಳಿಗೆ ಮತ್ತು ಅನ್ಯಥಾ ತಾನು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಅರ್ಜಿಯ ನಿಷ್ಪಕ್ಷಪಾತವಾದ ಮತ್ತು ಪರಿಣಾಮಕಾರಿಯಾದ ಅಧಿವಿಚಾರಣೆಯನ್ನು ಖಚಿತಪಡಿಸುವುದಕ್ಕಾಗಿ ಅರ್ಜಿಯಲ್ಲಿ ಹೇಳಲಾದ ವಿವರಗಳನ್ನು ತಾನು ಅವಶ್ಯವೆಂದು ಅಭಿಪ್ರಾಯ ಪಡಬಹುದಾದ ರೀತಿಯಲ್ಲಿ ದುರಸ್ತು ಮಾಡುವುದಕ್ಕೆ ಅಥವಾ ವಿಸ್ತರಿಸಿ ಹೇಳುವುದಕ್ಕೆ ಪ್ರಾಧಿಕಾರವು ಅನುಮತಿಯನ್ನು ಕೊಡಬಹುದು, ಆದರೆ ಅರ್ಜಿಯಲ್ಲಿ ಆ ಮುಂಚೆ ಹೇಳಿರದ ಭ್ರಷ್ಟಾಚಾರದ ವಿವರಗಳನ್ನು ಸೇರಿಸುವ ಪರಿಣಾಮವನ್ನುಂಟು ಮಾಡುವ ಅರ್ಜಿಯ ದುರಸ್ತಿಗೆ ಅನುಮತಿಯನ್ನು ಪ್ರಾಧಿಕಾರವು ಕೊಡತಕ್ಕದಲ್ಲ.

(5) ತಾನು ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ಅಧಿವಿಚಾರಣೆಯನ್ನು ಮುಂದಿನ ದಿನಕ್ಕಿಂತ ಹೆಚ್ಚಿಗೆ ಮುಂದಕ್ಕೆ ಹಾಕುವುದು ಅವಶ್ಯವೆಂದು ಪ್ರಾಧಿಕಾರಕ್ಕೆ ಕಂಡ ಹೊರತು, ಅಧಿವಿಚಾರಣೆಗೆ ಸಂಬಂಧಿಸಿ ನ್ಯಾಯದ ಹಿತದೃಷ್ಟಿಗೆ ಅನುಗುಣವಾಗಿ ಕಾರ್ಯ ಸಾಧ್ಯವಾಗುವಷ್ಟರ ಮಟ್ಟಿಗೆ, ಅರ್ಜಿಯ ಅಧಿವಿಚಾರಣೆಯು ಅದು ಮುಕ್ತಾಯವಾಗುವ ವರೆಗೆ ದಿನನಿತ್ಯವೂ ಮುಂದುವರಿಯತಕ್ಕದು.

(6) ಪ್ರತಿಯೊಂದು ಅರ್ಜಿಯ ಅಧಿವಿಚಾರಣೆಯನ್ನು ಸಾಧ್ಯವಾದಷ್ಟು ಶೀಘ್ರವಾಗಿ ಮಾಡತಕ್ಕದು ಮತ್ತು ಅಧಿವಿಚಾರಣೆಯು ಪ್ರಾರಂಭವಾದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಅಧಿವಿಚಾರಣೆಯನ್ನು ಮುಕ್ತಾಯಗೊಳಿಸಲು ಪ್ರಯತ್ನಿಸತಕ್ಕದು.

11. ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ :—(1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಪ್ರತಿಯೊಂದು ಅರ್ಜಿಯನ್ನು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ದಾವೆಗಳ ಅಧಿವಿಚಾರಣೆಯ ಬಗ್ಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಅನ್ವಯಿಸಬಹುದಾದ ಪ್ರಕ್ರಿಯೆಗೆ ಅನುಸಾರವಾಗಿ ಪ್ರಾಧಿಕಾರವು ಅಧಿವಿಚಾರಣೆಯನ್ನು ಮಾಡತಕ್ಕದು:

ಪರಂತು, ಪ್ರಾಧಿಕಾರವು ಬರಹದಲ್ಲಿ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಯಾವನೇ ಸಾಕ್ಷಿದಾರನ ಅಥವಾ ಸಾಕ್ಷಿದಾರರ ಸಾಕ್ಷ್ಯವು ಅರ್ಜಿಯ ತೀರ್ಮಾನಕ್ಕೆ ಮುಖ್ಯವಾಗಿಲ್ಲವೆಂದು ಅಥವಾ ಅಂಥ ಸಾಕ್ಷಿಯನ್ನು ಅಥವಾ ಸಾಕ್ಷಿಗಳನ್ನು ಕೊಡುತ್ತಿರುವ ಪಕ್ಷಕಾರನು ಅದನ್ನು ಕ್ಷುಲ್ಲಕ ಕಾರಣಗಳಿಗಾಗಿ ಅಥವಾ ವ್ಯವಹರಣೆಗಳನ್ನು ವಿಳಂಬಗೊಳಿಸುವುದಕ್ಕಾಗಿ ಮಾಡುತ್ತಿರುವನೆಂದು ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ಅಂಥ ಯಾವನೇ ಸಾಕ್ಷಿದಾರನನ್ನು ಅಥವಾ ಸಾಕ್ಷಿದಾರರನ್ನು ಪರೀಕ್ಷಿಸಲು ಇನಕಾರ ಮಾಡುವುದು ಅದರ ವಿವೇಚನೆಗೆ ಸೇರಿರತಕ್ಕದು.

(2) ಅಂಥ ಯಾವುದೇ ಅಧಿವಿಚಾರಣೆಯ ಉದ್ದೇಶಗಳಿಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ 5)ರ ಮೇರೆಗೆ ದಾವೆಯ ಅಧಿವಿಚಾರಣೆಯನ್ನು ನಡೆಸುತ್ತಿರುವಾಗ ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲ ಅಧಿಕಾರಗಳು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿ ಪ್ರಾಧಿಕಾರಕ್ಕೆ ಇರತಕ್ಕದು ; ಎಂದರೆ :—

(ಕ) ಯಾವನೇ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಹಾಗೂ ಪ್ರಮಾಣ ವಚನದ ಮೇಲೆ ಅವನನ್ನು ಪರೀಕ್ಷಿಸುವುದು ;

(ಖ) ಯಾವುದೇ ದಸ್ತಾವೇಜನ್ನು ಬಹಿರಂಗಪಡಿಸುವಂತೆ ಮತ್ತು ಹಾಜರಾಗುವಂತೆ ಅಗತ್ಯಪಡಿಸುವುದು ;

(ಗ) ಶಪಥಪತ್ರದ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು ;

(ಘ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು ;

(ಙ) ಸಾಕ್ಷಿದಾರರ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನುಗಳನ್ನು ಹೊರಡಿಸುವುದು;

(ಚ) ನಿಯಮಿಸಬಹುದಾದಂಥ ಇತರ ವಿಷಯಗಳು.

(3) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ ಉಪಬಂಧಗಳು ಎಲ್ಲ ವಿಧದಲ್ಲಿಯೂ ಅರ್ಜಿಯ ಅಧಿವಿಚಾರಣೆಗೆ ಅನ್ವಯಿಸುತ್ತವೆಂದು ಭಾವಿಸತಕ್ಕದು.

(4) ಪ್ರಾಧಿಕಾರದ ಮುಂದಿರುವ ಯಾವುದೇ ವ್ಯವಹರಣೆಯನ್ನು, ಭಾರತ ದಂಡ ಸಂಹಿತೆಯ (1860ರ 45)ರ 193ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದು.

12. ಮತದಾನದ ರಹಸ್ಯವನ್ನು ಉಲ್ಲಂಘಿಸತಕ್ಕದಲ್ಲ.—ಯಾವನೇ ಸಾಕ್ಷಿದಾರನನ್ನು ಅಥವಾ ಇತರ ವ್ಯಕ್ತಿಯನ್ನು ಅವನು ಚುನಾವಣೆಯಲ್ಲಿ ಯಾರಿಗೆ ತನ್ನ ಮತವನ್ನು ಕೊಟ್ಟಿದ್ದಾನೆಂಬುದನ್ನು ತಿಳಿಸಲು ಅಗತ್ಯಪಡಿಸತಕ್ಕದಲ್ಲ.

13. ಅಪರಾಧದಲ್ಲಿ ಸಿಕ್ಕಿಸುವ ಪ್ರಶ್ನೆಗಳಿಗೆ ಉತ್ತರಿಸುವುದು ಮತ್ತು ನಷ್ಟಭರ್ತಿಯ ಪ್ರಮಾಣನ ಪತ್ರ.—(1) ಅರ್ಜಿಯ ಅಧಿವಿಚಾರಣೆಯಲ್ಲಿ ವಿವಾದ್ಯ ವಿಷಯಕ್ಕೆ ಸುಸಂಗತವಾದ ಯಾವುದೇ ವಿಷಯದ ಬಗೆಗಿನ ಯಾವುದೇ ಪ್ರಶ್ನೆಯನ್ನು ಉತ್ತರಿಸುವುದರಿಂದ, ಅಂಥ ಪ್ರಶ್ನೆಯ ಉತ್ತರವು ಯಾವನೇ ಸಾಕ್ಷಿದಾರನನ್ನು ಅಪರಾಧದಲ್ಲಿ ಸಿಕ್ಕಿಸಬಹುದೆಂಬ ಅಥವಾ ಅವನನ್ನು ಅಪರಾಧದಲ್ಲಿ ಸಿಕ್ಕಿಸುವ ಸಾಧ್ಯತೆ ಇದೆಯೆಂಬ, ಅದು ಅವನನ್ನು ಯಾವುದೇ ದಂಡಕ್ಕೆ ಅಥವಾ ಮುಟ್ಟುಗೋಲಿಗೆ ಗುರಿಮಾಡಬಹುದೆಂಬ ಅಥವಾ ಗುರಿ ಮಾಡುವ ಸಾಧ್ಯತೆಯಿದೆಯೆಂಬ ಆಧಾರದ ಮೇಲೆ, ಅವನನ್ನು ಆ ಪ್ರಶ್ನೆಗೆ ಉತ್ತರಿಸದಂತೆ ಮಾಫು ಮಾಡತಕ್ಕದಲ್ಲ :

ಪರಂತು,—,

(ಕ) ಅಗತ್ಯಪಡಿಸಿರುವ ಎಲ್ಲ ಪ್ರಶ್ನೆಗಳನ್ನೂ ಸತ್ಯವಾಗಿ ಉತ್ತರಿಸುವ ಸಾಕ್ಷಿದಾರನು, ಪ್ರಾಧಿಕಾರದಿಂದ ನಷ್ಟಭರ್ತಿಯ ಪ್ರಮಾಣಪತ್ರವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದು ; ಮತ್ತು

(ಖ) ಸಾಕ್ಷ್ಯಕ್ಕೆ ಸಂಬಂಧಿಸಿ ಸುಳ್ಳು ಸಾಕ್ಷ್ಯಕ್ಕಾಗಿ ನಡೆಸಲಾದ ಯಾವುದೇ ಕ್ರಿಮಿನಲ್ ವ್ಯವಹರಣೆಯ ಸಂದರ್ಭವನ್ನು ಹೊರತುಪಡಿಸಿ, ಪ್ರಾಧಿಕಾರವು ಕೇಳಿದ ಅಥವಾ ಪ್ರಾಧಿಕಾರದ ಎದುರು ಕೇಳಲಾದ ಪ್ರಶ್ನೆಗೆ ಸಾಕ್ಷಿದಾರನು ಕೊಟ್ಟ ಉತ್ತರವು, ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ಅವನ ವಿರುದ್ಧ ಸಾಕ್ಷ್ಯವೆಂದು ಅಂಗೀಕಾರಾರ್ಹವಾಗತಕ್ಕದಲ್ಲ.

(2) ಯಾವನೇ ಸಾಕ್ಷಿದಾರನಿಗೆ ನಷ್ಟಭರ್ತಿಯ ಪ್ರಮಾಣಪತ್ರವನ್ನು ಕೊಟ್ಟಿರುವಾಗ, ಅಂಥ ಪ್ರಮಾಣಪತ್ರವು ಸಂಬಂಧಿಸಿದ ವಿಷಯದಿಂದ ಉದ್ಭವಿಸುವ, ಭಾರತ ದಂಡ ಸಂಹಿತೆಯ IXಕ ಅಧ್ಯಾಯದ ಮೇರೆಗಿನ ಅಥವಾ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಭಾಗ VIIರ ಮೇರೆಗಿನ ಯಾವುದೇ ಅಪಾದನೆಯ ಬಗ್ಗೆ ಅವನು ಯಾವುದೇ ನ್ಯಾಯಾಲಯದಲ್ಲಿ ವಾದಿಸಬಹುದು ಮತ್ತು ಆ ಬಗ್ಗೆ ಮತ್ತು ಅದರ ಮೇಲೆ ಅದು ಪೂರ್ಣವಾದ ಹಾಗೂ ಸಂಪೂರ್ಣವಾದ ಪ್ರತಿರಕ್ಷೆಯಾಗಿರತಕ್ಕದ್ದು, ಆದರೆ ಈ ಅಧಿನಿಯಮದ ಮೂಲಕ ಅಥವಾ ಯಾವುದೇ ಕಾನೂನಿನ ಮೂಲಕ ಚುನಾವಣೆಗೆ ಸಂಬಂಧಿಸಿ ವಿಧಿಸಲಾದ ಅನರ್ಹತೆಯಿಂದ ಅವನನ್ನು ಅದು ಮುಕ್ತಗೊಳಿಸುವುದೆಂದು ಭಾವಿಸತಕ್ಕದಲ್ಲ.

14. ಸಾಕ್ಷಿದಾರರ ವೆಚ್ಚಗಳು.—ಪ್ರಾಧಿಕಾರದ ಎದುರು ಸಾಕ್ಷ್ಯವನ್ನು ಕೊಡುವುದಕ್ಕಾಗಿ ಹಾಜರಾಗಲು ಯಾವನೇ ವ್ಯಕ್ತಿಗೆ ತಗಲಿದ ಯುಕ್ತವಾದ ವೆಚ್ಚಗಳನ್ನು ಅಂಥ ವ್ಯಕ್ತಿಗೆ ಕೊಡಲು ಅದು ಅನುಮತಿಸಬಹುದು, ಮತ್ತು ಪ್ರಾಧಿಕಾರವು ಅನ್ಯಥಾ ನಿರ್ದೇಶಿಸುವ ಹೊರತು ಅವುಗಳನ್ನು ಖರ್ಚುಗಳ ಭಾಗವೆಂದು ಭಾವಿಸತಕ್ಕದು.

15. ಸ್ಥಾನವನ್ನು ಕ್ಲೇಮು ಮಾಡಿದಾಗ ಪ್ರತ್ಯಾರೋಪ.—(1) ಆಯ್ಕೆಗೊಂಡ ಅಭ್ಯರ್ಥಿಯನ್ನುಳಿದು ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂಬ ಘೋಷಣೆಯನ್ನು ಅರ್ಜಿಯಲ್ಲಿ ಕ್ಲೇಮು ಮಾಡಿದಾಗ, ಅಂಥ ಅಭ್ಯರ್ಥಿಯು ಆಯ್ಕೆಗೊಂಡ ಅಭ್ಯರ್ಥಿಯಾಗಿದ್ದರೆ ಮತ್ತು ಅವನ ಚುನಾವಣೆಯನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಲಾಗಿದ್ದರೆ ಅಂಥ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗುತ್ತಿದ್ದಿತೆಂದು ಆಯ್ಕೆಗೊಂಡ ಅಭ್ಯರ್ಥಿಯು ಅಥವಾ ಇತರ ಯಾವನೇ ಪಕ್ಷಕಾರನು ರುಜುವಾತು ಪಡಿಸಲು ಸಾಕ್ಷ್ಯವನ್ನು ಕೊಡಬಹುದು :

(1) ಪರಂತು, ಆಯ್ಕೆಗೊಂಡ ಅಭ್ಯರ್ಥಿಯು ಅಥವಾ ಮೇಲೆ ಹೇಳಿದಂಥ ಇತರ ಪಕ್ಷಕಾರನು, ಅಧಿವಿಚಾರಣೆಯ ಪ್ರಾರಂಭವಾದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ, ಅಂಥ ಸಾಕ್ಷ್ಯವನ್ನು ಕೊಡುವ ಬಗ್ಗೆ ತನ್ನ ಉದ್ದೇಶವನ್ನು ಪ್ರಾಧಿಕಾರಕ್ಕೆ ನೋಟೀಸಿನ ಮೂಲಕ ಕೊಟ್ಟಿದ್ದ ಹೊರತು ಮತ್ತು 5ನೇ ಪ್ರಕರಣದ (4)ನೇ, (5)ನೇ ಹಾಗೂ (6)ನೇ ಉಪ–ಪ್ರಕರಣಗಳಲ್ಲಿ ಅನುಕ್ರಮವಾಗಿ ಉಲ್ಲೇಖಿಸಲಾದ ಭದ್ರತೆಯನ್ನು ಹಾಗೂ ಹೆಚ್ಚಿನ ಭದ್ರತೆಯನ್ನು ಕೊಟ್ಟಿದ್ದ ಹೊರತು ಅಂಥ ಸಾಕ್ಷ್ಯವನ್ನು ಕೊಡಲು ಹಕ್ಕುಳ್ಳವನಾಗಿರತಕ್ಕದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ನೋಟೀಸಿನ ಜತೆಗೆ, ಅರ್ಜಿಗೆ ಸಂಬಂಧಿಸಿ 7ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದ ನಿರೂಪಣೆಯು ಮತ್ತು ವಿವರಗಳು ಇರತಕ್ಕದು ಮತ್ತು ಅದೇ ರೀತಿಯಲ್ಲಿ ಅದಕ್ಕೆ ಸಹಿಹಾಕಿರತಕ್ಕದು ಹಾಗೂ ಅದು ಸತ್ಯಾಪಿತವಾಗಿರತಕ್ಕದು.

16. ಪ್ರಾಧಿಕಾರದ ತೀರ್ಮಾನ.—ಅರ್ಜಿಯ ಅಧಿವಿಚಾರಣೆಯು ಮುಗಿದ ಮೇಲೆ ಪ್ರಾಧಿಕಾರವು—

(ಕ) ಅರ್ಜಿಯನ್ನು ವಜಾ ಮಾಡುವ ; ಅಥವಾ

(ಖ) ಎಲ್ಲ ಅಥವಾ ಯಾವನೇ ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂದು ಘೋಷಿಸುವ : ಅಥವಾ

(ಗ) ಎಲ್ಲ ಅಥವಾ ಯಾವನೇ ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂದು ಮತ್ತು ಅರ್ಜಿದಾರನು ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುವ ;

—ಆದೇಶವನ್ನು ಮಾಡತಕ್ಕದು.

17. ಪ್ರಾಧಿಕಾರವು ಮಾಡಬೇಕಾದ ಇತರ ಆದೇಶಗಳು:—(1) 16ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವಾಗ, ಪ್ರಾಧಿಕಾರವು,—

(ಕ) ಚುನಾವಣೆಯಲ್ಲಿ ನಡೆಯಿತೆನ್ನಲಾದ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಅರ್ಜಿಯಲ್ಲಿ ಮಾಡಲಾಗಿರುವಲ್ಲಿ,—

(i) ಚುನಾವಣೆಯಲ್ಲಿ ಯಾವುದೇ ಭ್ರಷ್ಟಾಚಾರವು ನಡೆಯಿತೆಂದು ಅಥವಾ ನಡೆಯಲಿಲ್ಲವೆಂದು ರುಜುವಾತಾದುದರ ಬಗ್ಗೆ ನಿರ್ಣಯವನ್ನು, ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು ಅಭಿಲೇಖಿಸುವ ; ಮತ್ತು

(ii) ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥರು ಎಂದು ಅಧಿವಿಚಾರಣೆಯಲ್ಲಿ ರುಜುವಾತುಪಡಿಸಲಾದ ವ್ಯಕ್ತಿಗಳು, ಯಾರಾದರೂ ಇದ್ದರೆ, ಆ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ಮತ್ತು ಆ ಭ್ರಷ್ಟಾಚಾರದ ಸ್ವರೂಪವನ್ನು ಅಭಿಲೇಖಿಸುವ : ಮತ್ತು

(ಖ) ಸಂದಾಯವಾಗಬೇಕಾದ ಖರ್ಚುಗಳ ಒಟ್ಟು ಮೊಬಲಗನ್ನು ನಿಗದಿಪಡಿಸುವ ಹಾಗೂ ಖರ್ಚುಗಳು ಯಾವ ವ್ಯಕ್ತಿಗಳಿಂದ ಮತ್ತು ಯಾವ ವ್ಯಕ್ತಿಗಳಿಗೆ ಸಂದಾಯವಾಗತಕ್ಕದೆಂಬುದನ್ನು ನಿರ್ದಿಷ್ಟಪಡಿಸುವ ;

—ಆದೇಶವನ್ನು ಸಹ ಮಾಡತಕ್ಕದು :

ಪರಂತು, ಅರ್ಜಿಗೆ ಪಕ್ಷಕಾರನಾಗಿರದ ವ್ಯಕ್ತಿಯನ್ನು,—

(ಕ) ಪ್ರಾಧಿಕಾರದ ಎದುರು ಹಾಜರಾಗಲು ಮತ್ತು ಅವನ ಹೆಸರನ್ನು ಹಾಗೆ ಏತಕ್ಕೆ ಹೆಸರಿಸಬಾರದು ಎಂಬುದಕ್ಕೆ ಕಾರಣವನ್ನು ತೋರಿಸಲು ಅವನಿಗೆ ನೋಟೀಸನ್ನು ಕೊಟ್ಟ ಹೊರತು, ಮತ್ತು

(ಖ) ನೋಟೀಸಿಗೆ ಅನುಗುಣವಾಗಿ ಅವನು ಹಾಜರಾದರೆ, ಪ್ರಾಧಿಕಾರವು ಈಗಾಗಲೇ ಪರೀಕ್ಷಿಸಿದ ಮತ್ತು ಅವನ ವಿರುದ್ಧವಾಗಿ ಸಾಕ್ಷ್ಯವನ್ನು ಕೊಟ್ಟ ಯಾವನೇ ಸಾಕ್ಷಿದಾರನ ಪಾಟೀಸವಾಲನ್ನು ಮಾಡಲು, ತನ್ನ ಪ್ರತಿರಕ್ಷೆಗಾಗಿ ಸಾಕ್ಷ್ಯವನ್ನು ಕರೆಸುವ ಮತ್ತು ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ಹೊರತು ;

—(ಕ) ಖಂಡದ (ii)ನೇ ಉಪ–ಖಂಡದ ಮೇರೆಗೆ ಆದೇಶದಲ್ಲಿ ಹೆಸರಿಸತಕ್ಕದಲ್ಲ.

(2) ಈ ಪ್ರಕರಣದಲ್ಲಿ ಮತ್ತು 18ನೇ ಪ್ರಕರಣದಲ್ಲಿ "ಏಜೆಂಟ್" ಎನ್ನುವ ಪದಕ್ಕೆ ಜನತಾ ಪ್ರಾತಿನಿಧ್ಯ (1951ರ 43) ಅಧಿನಿಯಮ, 1957ರ 123ನೇ ಪ್ರಕರಣದಲ್ಲಿ ಅದಕ್ಕಿರುವ ಅರ್ಥವೇ ಇರುತ್ತದೆ.

18. ಚುನಾವಣೆಯು ಶೂನ್ಯವಾಗಿದೆಯೆಂದು ಘೋಷಿಸಲು, ಇರುವ ಆಧಾರಗಳು.—(1) (2)ನೇ ಉಪ-ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಪ್ರಾಧಿಕಾರವು,—

(ಕ) ಆಯ್ಕೆಯಾದ ಅಭ್ಯರ್ಥಿಯು ತನ್ನ ಚುನಾವಣೆಯ ದಿನಾಂಕದಂದು, ಸಂವಿಧಾನದ ಅಥವಾ ಜನತಾ ಪ್ರಾತಿನಿಧ್ಯ ಅಧಿನಿಯಮ, 1951ರ ಅಥವಾ ಈ ಅಧಿನಿಯಮದ ಅಥವಾ ಸಂಘ ರಾಜ್ಯ ಕ್ಷೇತ್ರಗಳ ಸರಕಾರದ ಅಧಿನಿಯಮ, 1963ರ ಮೇರೆಗೆ ಸ್ಥಾನವನ್ನು ಭರ್ತಿಮಾಡುವುದಕ್ಕಾಗಿ ಆಯ್ಕೆಯಾಗಲು ಅರ್ಹನಾಗಿರಲಿಲ್ಲ, ಅಥವಾ ಅವನನ್ನು ಅನರ್ಹಗೊಳಿಸಲಾಗಿತ್ತು ಎಂದು ; ಅಥವಾ

(ಖ) ಆಯ್ಕೆಗೊಂಡ ಅಭ್ಯರ್ಥಿಯು ಅಥವಾ ಅವನ ಚುನಾವಣಾ ಏಜೆಂಟನು ಅಥವಾ ಆಯ್ಕೆಗೊಂಡ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾನೆಂದು ; ಅಥವಾ

(ಗ) ಯಾವುದೇ ನಾಮನಿರ್ದೇಶವನ್ನು ಯುಕ್ತವಲ್ಲದ ರೀತಿಯಲ್ಲಿ ತಿರಸ್ಕರಿಸಲಾಗಿದೆಯೆಂದು : ಅಥವಾ

(ಘ) ಚುನಾವಣೆ ಫಲಿತಾಂಶವು ಆಯ್ಕೆಗೊಂಡ ಅಭ್ಯರ್ಥಿಗೆ ಸಂಬಂಧಪಟ್ಟವಷ್ಟರ ಮಟ್ಟಿಗೆ:—

(i) ಯಾವುದೇ ನಾಮನಿರ್ದೇಶವನ್ನು ಯುಕ್ತವಲ್ಲದ ರೀತಿಯಲ್ಲಿ ಅಂಗೀಕರಿಸಿರುವುದರಿಂದಾಗಿ ; ಅಥವಾ

(ii) ಅವನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ ಬೇರೆ ಏಜೆಂಟನು ಆಯ್ಕೆಗೊಂಡ ಅಭ್ಯರ್ಥಿಯ ಹಿತಕ್ಕಾಗಿ ಮಾಡಿದ ಯಾವುದೇ ಭ್ರಷ್ಟಾಚಾರದಿಂದಾಗಿ ; ಅಥವಾ

(iii) ಯಾವುದೇ ಮತವನ್ನು ಯುಕ್ತವಲ್ಲದ ರೀತಿಯಲ್ಲಿ ಸ್ವೀಕರಿಸಿದುದರಿಂದಾಗಿ, ನಿರಾಕರಿಸಿದುದರಿಂದಾಗಿ ಅಥವಾ ತಿರಸ್ಕರಿಸಿದುದರಿಂದಾಗಿ ಅಥವಾ ಶೂನ್ಯವಾದ ಯಾವುದೇ ಮತವನ್ನು ಸ್ವೀಕರಿಸಿದುದರಿಂದಾಗಿ ; ಅಥವಾ

(iv) ಸಂವಿಧಾನದ ಅಥವಾ ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಉಪಬಂಧಗಳನ್ನು ಅಥವಾ ಆದೇಶಗಳನ್ನು ಪಾಲಿಸದಿರುವುದರಿಂದಾಗಿ ;

ಗಣನೀಯವಾಗಿ ಬಾಧಿತವಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ, ಪ್ರಾಧಿಕಾರವು ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂದು, ಘೋಷಿಸತಕ್ಕದು.

(2) ಆಯ್ಕೆಗೊಂಡ ಅಭ್ಯರ್ಥಿಯು, ತನ್ನ ಚುನಾವಣಾ ಏಜೆಂಟನಲ್ಲದ ಇತರ ಏಜೆಂಟನಿಂದಾಗಿ ಯಾವುದೇ ಭ್ರಷ್ಟಾಚಾರದ ಬಗ್ಗೆ ತಪ್ಪಿತಸ್ಥನಾಗಿದ್ದಾನೆಂದು ಪ್ರಾಧಿಕಾರವು ಅಭಿಪ್ರಾಯಪಟ್ಟಿದ್ದು, ಆದರೆ,—

(ಕ) ಅಭ್ಯರ್ಥಿಯಿಂದ ಅಥವಾ ಅವನ ಚುನಾವಣಾ ಏಜೆಂಟನಿಂದ ಚುನಾವಣೆಯಲ್ಲಿ ಅಂಥ ಯಾವುದೇ ಭ್ರಷ್ಟಾಚಾರವು ನಡೆದಿಲ್ಲವೆಂದು, ಮತ್ತು ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಆದೇಶಗಳಿಗೆ ವಿರುದ್ಧವಾಗಿ ಮತ್ತು ಅವನ ಸಮ್ಮತಿಯಿಲ್ಲದೆ ಅಂಥ ಪ್ರತಿಯೊಂದು ಭ್ರಷ್ಟಾಚಾರವು ನಡೆದಿದೆಯೆಂದು ;

(ಖ) ಅಭ್ಯರ್ಥಿಯು ಮತ್ತು ಅವನ ಚುನಾವಣಾ ಏಜೆಂಟನು ಚುನಾವಣೆಯಲ್ಲಿ ಭ್ರಷ್ಟಾಚಾರವು ನಡೆಯುವುದನ್ನು ಪ್ರತಿಬಂಧಿಸುವುದಕ್ಕಾಗಿ ಎಲ್ಲ ಯುಕ್ತ ಕ್ರಮಗಳನ್ನು ಕೈಗೊಂಡಿದ್ದಾರೆಂದು ; ಮತ್ತು

(ಗ) ಅಭ್ಯರ್ಥಿಯ ಅಥವಾ ಅವನ ಯಾವನೇ ಏಜೆಂಟನಿಗೆ ಸಂಬಂಧಿಸಿ, ಇತರ ಎಲ್ಲಾ ವಿಷಯಗಳಲ್ಲಿಯೂ ಚುನಾವಣೆಯು ಯಾವುದೇ ಭ್ರಷ್ಟಾಚಾರದಿಂದ ಮುಕ್ತವಾಗಿತ್ತೆಂದು ;

—ಪ್ರಾಧಿಕಾರಕ್ಕೆ ಮನದಟ್ಟಾದರೆ, ಆಗ ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿಲ್ಲವೆಂದು ಪ್ರಾಧಿಕಾರವು ತೀರ್ಮಾನಿಸಬಹುದು.

19. ಆಯ್ಕೆಗೊಂಡ ಅಭ್ಯರ್ಥಿಯಲ್ಲದ ಇತರ ಅಭ್ಯರ್ಥಿಯು ಚುನಾಯಿತನಾಗಿರುವನೆಂದು ಘೋಷಿಸಬಹುದು.—ಅರ್ಜಿಯನ್ನು ಸಲ್ಲಿಸಿರುವ ಯಾವನೇ ವ್ಯಕ್ತಿಯು, ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸುವುದರ ಜೊತೆಗೆ, ತಾನು ಅಥವಾ ಇತರ ಯಾವನೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಘೋಷಣೆ ಮಾಡಬೇಕೆಂದು ಕ್ಲೇಮು ಮಾಡಿದ್ದರೆ, ಮತ್ತು ಪ್ರಾಧಿಕಾರವು,—

(ಕ) ವಾಸ್ತವವಾಗಿ ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಮತಗಳಲ್ಲಿ ಬಹುಮತಗಳಿಸಿದ್ದಾನೆಂದು ; ಅಥವಾ

(ಖ) ಆಯ್ಕೆಗೊಂಡ ಅಭ್ಯರ್ಥಿಯು ಭ್ರಷ್ಟಾಚಾರದ ಮೂಲಕ ಮತಗಳನ್ನು ಪಡೆದಿರದಿದ್ದರೆ, ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಮತಗಳಲ್ಲಿ ಬಹುಮತಗಳಿಸುತ್ತಿದ್ದನೆಂದು ;

—ಅಭಿಪ್ರಾಯಪಟ್ಟರೆ, ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆಯೆಂದು ಪ್ರಾಧಿಕಾರವು ಘೋಷಿಸಿದ ಅನಂತರ, ಸಂದರ್ಭಾನುಸಾರ, ಅರ್ಜಿದಾರನು ಅಥವಾ ಅಂಥ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವನೆಂದು ಘೋಷಿಸತಕ್ಕದು.

20. ಪ್ರಾಧಿಕಾರದ ಆದೇಶಗಳನ್ನು ತಿಳಿಸುವುದು.—ಪ್ರಾಧಿಕಾರವು ಅರ್ಜಿಯ ಅಧಿವಿಚಾರಣೆಯು ಮುಕ್ತಾಯವಾದ ಅನಂತರ, ಆದಷ್ಟು ಬೇಗನೆ, ಚುನಾವಣಾ ಆಯೋಗಕ್ಕೆ ಮತ್ತು ಸಂದರ್ಭಾನುಸಾರ ಸಂಸತ್ತಿನ ಸದನದ ಅಧ್ಯಕ್ಷನಿಗೆ ಅಥವಾ ಸಭಾಪತಿಗೆ ಆ ತೀರ್ಮಾನದ ಸಾರಾಂಶವನ್ನು ತಿಳಿಸತಕ್ಕದು, ಮತ್ತು ತದನಂತರ ಆದಷ್ಟು ಬೇಗನೆ, ಚುನಾವಣಾ ಆಯೋಗಕ್ಕೆ ಆ ತೀರ್ಮಾನದ ಅಧಿಪ್ರಮಾಣಿತ ಪ್ರತಿಯನ್ನು ಕಳಿಸತಕ್ಕದು.

21. ಖರ್ಚುಗಳು.—ಖರ್ಚುಗಳು ಪ್ರಾಧಿಕಾರದ ವಿವೇಚನೆಗೆ ಒಳಪಟ್ಟಿರತಕ್ಕದು:

ಪರಂತು, 16ನೇ ಪ್ರಕರಣದ (ಕ) ಖಂಡದ ಮೇರೆಗೆ ಅರ್ಜಿಯನ್ನು ವಜಾ ಮಾಡಿರುವಲ್ಲಿ, ಅರ್ಜಿಯನ್ನು ವಿರೋಧಿಸುವಲ್ಲಿ ತನಗೆ ತಗುಲಿದ ಖರ್ಚುಗಳನ್ನು ಪಡೆಯಲು ಆಯ್ಕೆಗೊಂಡ ಅಭ್ಯರ್ಥಿಯು ಹಕ್ಕುಳ್ಳವನಾಗಿರತಕ್ಕದು ಮತ್ತು ತದನುಸಾರವಾಗಿ ಆಯ್ಕೆಗೊಂಡ ಅಭ್ಯರ್ಥಿಯ ಪರವಾಗಿ ಖರ್ಚುಗಳಿಗಾಗಿ ಪ್ರಾಧಿಕಾರವು ಆದೇಶವನ್ನು ಮಾಡತಕ್ಕದು.

22. ಪ್ರಾಧಿಕಾರದ ಆದೇಶಗಳು ಅಂತಿಮವಾದುವುಗಳಾಗಿರತಕ್ಕದು.—ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದಲ್ಲ.

23. ಪ್ರಾಧಿಕಾರದ ಆದೇಶಗಳ ಪರಿಣಾಮ.—(1) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ಮಾಡಿದ ಆದೇಶವು ಅದನ್ನು ಉಚ್ಚರಿಸಿದ ಕೂಡಲೇ ಪರಿಣಾಮಕಾರಿಯಾಗತಕ್ಕದು.

(2) ಆಯ್ಕೆಗೊಂಡ ಅಭ್ಯರ್ಥಿಯ ಚುನಾವಣೆಯು 16ನೇ ಪ್ರಕರಣದ ಮೇರೆಗಿನ ಆದೇಶದ ಮೂಲಕ ಶೂನ್ಯವೆಂದು ಘೋಷಿತವಾಗಿರುವಲ್ಲಿ, ಆ ದಿನಾಂಕಕ್ಕೆ ಮುಂಚೆ, ಆಯ್ಕೆಗೊಂಡ ಅಭ್ಯರ್ಥಿಯು ಸಂಸತ್ತಿನ ಸದಸ್ಯನಾಗಿ ಅಥವಾ ಪ್ರಧಾನ ಮಂತ್ರಿಯಾಗಿ ಅಥವಾ ಲೋಕಸಭೆಯ ಅಧ್ಯಕ್ಷನಾಗಿ ಭಾಗವಹಿಸಿದ ಕಾರ್ಯಗಳು ಮತ್ತು ವ್ಯವಹರಣೆಗಳು ಆ ಆದೇಶದ ಕಾರಣದಿಂದಾಗಿ ಅಸಿಂಧುವಾಗತಕ್ಕದಲ್ಲ, ಅಥವಾ ಅಂಥ ಅಭ್ಯರ್ಥಿಯು, ಹಾಗೆ ಭಾಗವಹಿಸಿದ ಕಾರಣದಿಂದಾಗಿ, ಯಾವುದೇ ಹೊಣೆಗಾರಿಕೆಗೆ ಅಥವಾ ದಂಡಕ್ಕೆ ಒಳಪಡತಕ್ಕದಲ್ಲ.

## ಅಧ್ಯಾಯ — V

### ಸಂಕೀರ್ಣ

24. ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದು ಮತ್ತು ಕೊನೆಗೊಳಿಸುವುದು.—ಚುನಾವಣಾ ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಮತ್ತು ಕೊನೆಗೊಳಿಸುವುದಕ್ಕೆ ಸಂಬಂಧಿಸಿದ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43)ರ 109 ರಿಂದ 116ರ ವರೆಗಿನ (ಎರಡನ್ನೂ ಒಳ

ಗೊಂಡ) ಪ್ರಕರಣಗಳ ಉಪಬಂಧಗಳು, ಆದಷ್ಟು ಮಟ್ಟಿಗೆ, ಚುನಾವಣಾ ಅರ್ಜಿಯ, ಉಚ್ಚನ್ಯಾಯಾಲಯದ ಮತ್ತು ಅರ್ಜಿದಾರನ ಬಗ್ಗೆ, ಅವುಗಳಲ್ಲಿರುವ ಉಲ್ಲೇಖಗಳನ್ನು ಅನುಕ್ರಮವಾಗಿ ಈ ಅಧಿನಿಯಮದ ಮೇರೆಗಿನ ಅರ್ಜಿಯ ಅಂಥ ಅರ್ಜಿಯ ಸುನಾವಣೆಯನ್ನು ಮಾಡುವ ಪ್ರಾಧಿಕಾರದ ಮತ್ತು ಅಂಥ ಅರ್ಜಿಯ ಸಂಬಂಧದಲ್ಲಿನ ಅರ್ಜಿದಾರನ ಬಗೆಗಿನ ಉಲ್ಲೇಖಗಳೆಂದು ಅರ್ಥೈಸತಕ್ಕದೆಂಬ ಮಾರ್ಪಾಟಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಅರ್ಜಿಗಳನ್ನು ಹಿಂತೆಗೆದುಕೊಳ್ಳುವುದಕ್ಕೆ ಮತ್ತು ಕೊನೆಗೊಳಿಸುವುದಕ್ಕೆ ಸಂಬಂಧಿಸಿ ಅನ್ವಯಿಸತಕ್ಕದು.

25. ಭದ್ರತಾ ಠೇವಣಿಗಳಿಂದ ಖರ್ಚುಗಳ ಸಂದಾಯ ಮತ್ತು ಅಂಥ ಠೇವಣಿಗಳ ವಾಪಸಾತಿ.—(1) ಖರ್ಚುಗಳ ಬಗ್ಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಆದೇಶದಲ್ಲಿ ಯಾವನೇ ವ್ಯಕ್ತಿಗೆ ಯಾವನೇ ಪಕ್ಷಕಾರನು ಖರ್ಚುಗಳನ್ನು ಸಂದಾಯ ಮಾಡಬೇಕೆಂಬ ನಿರ್ದೇಶವಿದ್ದರೆ, ಯಾರಿಗೆ ಆ ಖರ್ಚುಗಳನ್ನು ಕೊಡಬೇಕಾಗಿದೆಯೋ ಆ ವ್ಯಕ್ತಿಯು ಚುನಾವಣಾ ಆಯೋಗಕ್ಕೆ ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಆ ಬಗ್ಗೆ ಬರಹ ಮೂಲಕ ಸಲ್ಲಿಸಿದ ಅರ್ಜಿಯ ಮೇಲೆ, ಅಂಥ ಖರ್ಚುಗಳನ್ನು ಈಗಾಗಲೇ ಸಂದಾಯ ಮಾಡಿರದಿದ್ದರೆ ಅವುಗಳನ್ನು ಭದ್ರತಾ ಠೇವಣಿಯಿಂದ ಮತ್ತು ಈ ಅಧಿನಿಯಮದ ಮೇರೆಗೆ ಅಂಥ ಪಕ್ಷಕಾರನು ಮಾಡಿದ ಹೆಚ್ಚಿನ ಭದ್ರತಾ ಠೇವಣಿ ಏನಾದರೂ ಇದ್ದರೆ, ಅದರಿಂದ, ಪೂರ್ಣವಾಗಿ ಅಥವಾ ಸಾಧ್ಯವಾದಷ್ಟುಮಟ್ಟಿಗೆ ಸಂದಾಯ ಮಾಡತಕ್ಕದು.

(2) (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಖರ್ಚುಗಳನ್ನು ಆ ಉಪ ಪ್ರಕರಣದ ಮೇರೆಗೆ ಸಂದಾಯ ಮಾಡಿದ ಅನಂತರ ಸದರಿ ಭದ್ರತಾ ಠೇವಣಿಗಳಲ್ಲಿ ಯಾವುದೇ ಶಿಲ್ಕು ಉಳಿದರೆ, ಅಂಥ ಶಿಲ್ಕನ್ನು, ಅಥವಾ ಯಾವುವೇ ಖರ್ಚುಗಳನ್ನು ಕೊಟ್ಟಿರದಿದ್ದಲ್ಲಿ ಅಥವಾ ಸದರಿ ಒಂದು ವರ್ಷದ ಅವಧಿಯೊಳಗೆ ಮೇಲೆ ತಿಳಿಸಿದಂತೆ ಯಾವುದೇ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ, ಯಾವ ವ್ಯಕ್ತಿಯು ಠೇವಣಿಯನ್ನು ಮಾಡಿದ್ದಾನೋ ಆ ವ್ಯಕ್ತಿಯು, ಅಥವಾ ಅಂಥ ಠೇವಣಿಯನ್ನು ಮಾಡಿದ ಅನಂತರ ಅಂಥ ವ್ಯಕ್ತಿಯು ಮೃತನಾದರೆ, ಅಂಥ ವ್ಯಕ್ತಿಯ ಕಾನೂನುಸಮ್ಮತ ಪ್ರತಿನಿಧಿಯು ಚುನಾವಣಾ ಆಯೋಗಕ್ಕೆ ಈ ಬಗ್ಗೆ ಬರಹ ಮೂಲಕ ಸಲ್ಲಿಸಿದ ಅರ್ಜಿಯ ಮೇಲೆ, ಸಂದರ್ಭಾನುಸಾರ ಸದರಿ ವ್ಯಕ್ತಿಗೆ ಅಥವಾ ಅವನ ಕಾನೂನುಸಮ್ಮತ ಪ್ರತಿನಿಧಿಗೆ, ಸದರಿ ಭದ್ರತಾ ಠೇವಣಿಯ ಪೂರ್ಣ ಮೊಬಲಗನ್ನು ವಾಪಸು ಕೊಡಬಹುದು.

26. ಖರ್ಚುಗಳ ಬಗೆಗಿನ ಆದೇಶಗಳ ಜಾರಿ.—ಖರ್ಚುಗಳ ಬಗ್ಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅಂಥ ಆದೇಶದ ಮೂಲಕ ಯಾವುದೇ ಹಣದ ಮೊಬಲಗನ್ನು ಸಂದಾಯ ಮಾಡಲು ನಿರ್ದೇಶಿತನಾಗಿರುವ ವ್ಯಕ್ತಿಯು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ವಾಸಸ್ಥಳವನ್ನು ಅಥವಾ ವ್ಯಾಪಾರ ಸ್ಥಳವನ್ನು ಹೊಂದಿರುವನೋ ಆ ಅಸಲು ಅಧಿಕಾರ ವ್ಯಾಪ್ತಿಯುಳ್ಳ ಪ್ರಧಾನ ಸಿವಿಲ್ ನ್ಯಾಯಾಲಯದ ಸಮಕ್ಷಮದಲ್ಲಿ ಅಥವಾ ಅಂಥ ಸ್ಥಳವು ಪ್ರೆಸಿಡೆನ್ಸಿ ನಗರದೊಳಗೆ ಇರುವಲ್ಲಿ, ಅಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಲಘು ವಿವಾದ ನ್ಯಾಯಾಲಯದ ಸಮಕ್ಷಮದಲ್ಲಿ ಹಾಜರುಪಡಿಸಬಹುದು, ಮತ್ತು ಅಂಥ ನ್ಯಾಯಾಲಯವು ದಾವೆಯಲ್ಲಿ ಹಣದ ಸಂದಾಯಕ್ಕಾಗಿ ತಾನೇ ಡಿಕ್ರಿ ಮಾಡಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅದೇ ಪ್ರಕ್ರಿಯೆಯಲ್ಲಿ ಆದೇಶವನ್ನು ಜಾರಿ ಮಾಡತಕ್ಕದು ಅಥವಾ ಅದು ಜಾರಿಯಾಗುವಂತೆ ಮಾಡತಕ್ಕದು :

ಪರಂತು, 25ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ಮೂಲಕ ಅಂಥ ಯಾವುವೇ ಖರ್ಚುಗಳನ್ನು ಅಥವಾ ಅವುಗಳ ಯಾವುದೇ ಭಾಗವನ್ನು ವಸೂಲು ಮಾಡಬಹುದಾಗಿರುವಲ್ಲಿ, ಆ ಉಪ-ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ಅನಂತರ, ಆ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಭದ್ರತಾ ಠೇವಣಿಗಳ ಮೊಬಲಗು ಸಾಕಷ್ಟಿರದಿರುವುದರಿಂದಾಗಿ, ವಸೂಲಾಗದೆ ಉಳಿದ ಯಾವುವೇ ಖರ್ಚುಗಳ ಶಿಲ್ಕಿನ ವಸೂಲಿಗಾಗಿ ಆ ಅರ್ಜಿಯನ್ನು ಸಲ್ಲಿಸಿರುವ ಹೊರತು, ಅಂಥ ಆದೇಶವನ್ನು ಮಾಡಿದ ಒಂದು ವರ್ಷದ ಅವಧಿಯೊಳಗಾಗಿ ಈ ಪ್ರಕರಣದ ಮೇರೆಗೆ ಯಾವ ಅರ್ಜಿಯನ್ನೂ ಸಲ್ಲಿಸಲು ಅವಕಾಶವಿರತಕ್ಕದಲ್ಲ.

27. ನಿಯಮ ರಚನಾಧಿಕಾರ.—(1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕಾಗಿ ಬಾಧೆಬಾರದಂತೆ, ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ.—

(ಕ) ಅರ್ಜಿದಾರನು ಖರ್ಚುಗಳ ಬಗ್ಗೆ ಭದ್ರತೆಯಾಗಿ ಇಡಬೇಕಾದ ಠೇವಣಿ ಅಥವಾ ಹೆಚ್ಚಿನ ಠೇವಣಿ;

(ಖ) ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಪ್ರಾಧಿಕಾರಗಳಿಗೆ ನೆರವಾಗಲು ಅಧಿಕಾರಿಗಳ ಮತ್ತು ಇತರ ನಿಯೋಜಿತರ ನೇಮಕ ಮತ್ತು ಅಂಥ ಅಧಿಕಾರಿಗಳ ಮತ್ತು ಇತರ ನಿಯೋಜಿತರ ಸೇವಾ ಷರತ್ತುಗಳು ;

(ಗ) ಈ ಅಧಿನಿಯಮದ ಮೇರೆಗೆ ಮಾಡಿದ ಠೇವಣಿಗಳ ಅಭಿರಕ್ಷೆ, 25ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯ ಮೇಲೆ ಅಂಥ ಠೇವಣಿಗಳಿಂದ ಖರ್ಚುಗಳ ಸಂದಾಯ ಮತ್ತು ಅಂಥ ಅರ್ಜಿಗಳ ವಿಲೆಗೆ ಸಂಬಂಧಿಸಿದ ಇತರ ವಿಷಯಗಳು;

(ಘ) ಈ ಅಧಿನಿಯಮದ ಮೇರೆಗೆ ಯಾವುದೇ ಆವೇದನೆಯ ಅಥವಾ ಅರ್ಜಿಯ ಸಂಬಂಧದಲ್ಲಿ ಸಂದಾಯವಾಗಬೇಕಾದ ಫೀಜು, ಯಾವುದಾದರೂ ಇದ್ದರೆ;

(ಙ) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ಉಪಬಂಧಿಸಬೇಕಾದ ಯಾವುದೇ ಇತರ ವಿಷಯ

(3) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದು ರಚಿತವಾದ ಅನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದೇ ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವ ಮುಂಚೆ, ಆ ಅಧಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದೂ ಎರಡೂ ಸದನಗಳು ಒಪ್ಪಿದರೆ, ತದನಂತರ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದು.

28. ನಿರಸನ ಮತ್ತು ಉಳಿಸುವಿಕೆ.—(1) (ಪ್ರಧಾನ ಮಂತ್ರಿ ಮತ್ತು ಅಧ್ಯಕ್ಷರ) ವಿವಾದಿತ ಚುನಾವಣಾ ಅಧ್ಯಾದೇಶ, 1977ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದಾಗೂ, ಸದರಿ ಅಧ್ಯಾದೇಶದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಕೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಕೊಳ್ಳಲಾಗಿದೆಯೆಂದು ಭಾವಿಸತಕ್ಕದು.